ದಿನಾಂಕಃ11-02-2025 ರಂದು ಡಿ.ಡಬ್ಲ್ಯೂ-1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲು : ವಾದಿ ಪರ ಶ್ರೀ.ಸಿ.ಆರ್.ಎಸ್ ವಕೀಲರಿಂದಃ**

1. ಪ್ರಸ್ತುತ ದಾವೆಯನ್ನು ಸರಸ್ವತಿ, ಬಸವರಾಜ, ಮನೋಹರ ಮತ್ತ ಗೌರವ್ವ ಸಲ್ಲಿಸಿರುತ್ತಾರೆ. 1 ನೇ ವಾದಿ ಸರಸ್ವತಿ ಇವರು ನನ್ನ ಅಜ್ಜಿ ಅಂದರೆ, ನನ್ನ ತಂದೆಯ ತಾಯಿ ಇರುತ್ತಾರೆ. 1 ನೇ ವಾದಿಗೆ ಸುಮಾರು 75 ರಿಂದ 80 ವಯುಸ್ಸು ಇರುತ್ತದೆ. ನನ್ನ ಅಜ್ಜನ ಹೆಸರು ಚೆನ್ನಪ್ಪ. ಸದರಿ ನನ್ನ ಅಜ್ಜನಿಗೆ 8 ಜನ ಮಕ್ಕಳು ಇರುತ್ತಾರೆ, ಅವರ ಹೆಸರುಗಳು ಬಸವರಾಜ, ಗೌರವ್ವ, ಅಶೋಕ, ಮನೋಹರ, ದಿಲೀಪ, ವಿಠಲ, ಮಾಲಾ ಮತ್ತು ಶೋಭಾ ಇರುತ್ತವೆ. ಸದರಿ ನನ್ನ ಅಜ್ಜ ಚೆನ್ನಪ್ಪ ಇವರ ತೆಂದೆ ಹೆಸರು ಬಸಪ್ಪ ಇರುತ್ತದೆ. ಸದರಿ ಬಸಪ್ಪ ಇವರಿಗೆ 4 ಜನ ಮಕ್ಕಳು ಇರುತ್ತಾರೆ, ಅವರ ಹೆಸರುಗಳು ಚೆನ್ನಪ್ಪ, ರಾಮಪ್ಪ , ಲಕ್ಷ್ಮಿಬಾಯಿ ಮತ್ತು ಭಾಗವ್ವ ಇರುತ್ತವೆ. ಸದರಿ ಲಕ್ಷ್ಮಿಬಾಯಿ ಮತ್ತು ಭಾಗವ್ವ ಇವರಿಗೆ ಮದುವೆಯಾಗಿರಲಿಲ್ಲ. ಸದರಿ ರಾಮಪ್ಪ ಇವರಿಗೂ ಸಹ ಮದುವೆಯಾಗಿರಲಿಲ್ಲ. ಸದರಿ ರಾಮಪ್ಪ ಯಾವಾಗ ಮರಣ ಹೊಂದಿರುತ್ತಾರೆ ನನಗೆ ಗೊತ್ತಿಲ್ಲ. ಸದರಿ ರಾಮಪ್ಪ ಇವರ ಹೆಂಡತಿ ಹೆಸರು ದೊಡ್ಡವ್ವ ಮತ್ತು ಮಗನ ಹೆಸರು ಸದಾಶಿವ ಎಂದರೆ ಸರಿಯಲ್ಲ.

2. 10 ರಿಂದ 13 ನೇ ಪ್ರತಿವಾದಿಯರು ಸದರಿ ರಾಮಪ್ಪ ಇವರ ವಂಶಸ್ಥರು ಎಂದರೆ ಸರಿಯಲ್ಲ. ನನ್ನ ಅಜ್ಜ ಚೆನ್ನಪ್ಪ ರಾಮಪ್ಪ ಇವರಿಗಿಂತ ಹಿರಿಯವನಾಗಿದ್ದ. ಸದರಿ ಬಾಗವ್ವ ನಮ್ಮ ಮನೆಯಲ್ಲಿ ಇದ್ದಳು. ಸದರಿ ಬಾಗವ್ವ ಇವರ ಆರೈಕೆಯನ್ನು ನಾವೇ ಮಾಡಿರುತ್ತೇವೆ. ಸದರಿ ಬಾಗವ್ವ ಇವರಿಗೆ ಕಣ್ಣು ಕಾಣಿಸುತ್ತಿರಲ್ಲಿ ಮತ್ತು ಕಿವಿ ಕೇಳಿಸುತ್ತಿರಲ್ಲಿ ಎಂದರೆ ಸರಿಯಲ್ಲ. ನನ್ನ ತಂದೆ ಸುಮಾರು 2-3 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ.

3. ಸದರಿ ಬಸಪ್ಪ ಇವರ ಮರಣಾನಂತರ ಅವರ ಸ್ವತ್ತುಗಳನ್ನು, ಅವರ ನಾಲ್ಕು ಜನ ಮಕ್ಕಳು ವಾರಸಾ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ಚೆನ್ನಪ್ಪ ಇವರ ಮರಣಾನಂತರ ಆತನ ಮಕ್ಕಳ ಪೈಕಿ ಶೋಭಾ ಮತ್ತು ವಿಠ್ಠಲ ಇವರ ಹೆಂಡತಿಯನ್ನು ಹೊರತುಪಡಿಸಿ ಉಳಿದ ಅವರ ಎಲ್ಲಾ ಮಕ್ಕಳು ಆಸ್ತಿಯನ್ನು ವಾರಸಾ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ದಾವಾಸ್ವತ್ತು ಸಿ.ಟಿ.ಎಸ್ 515 ಮತ್ತು 4660 ಇವುಗಳು ಹಿರಿಯರ ಆಸ್ತಿಗಳು ಆಗಿದ್ದರಿಂದ ಈ ಮೇಲೆ ಹೇಳಿದ ಚೆನ್ನಪ್ಪನ ವಾರಸಾದಾರರು ವಾರಸಾ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಚೆನ್ನಪ್ಪ ಇವರ ಮರಣಾನಂತರ ಆತನ ಎಲ್ಲ ವಾರಸದಾರರು ದಾವಾಸ್ವತ್ತು ಸಿ.ಟಿ.ಎಸ್ 517 ವಾರಸಾ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ದಾವಾಸ್ವತ್ತು ಕ್ರಮಾಂಕ 1 ರಿಂದ 3 ಮತ್ತು 5 ಇವುಗಳು ನಮ್ಮ ಹಿರಿಯಲ ಆಸ್ತಿಗಳು ಎಂದರೆ ಸರಿಯಲ್ಲ. ದಾವಾಸ್ವತ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ರೀತಿ ವಾಟ್ನಿಯಾಗಿರುವುದಿಲ್ಲ ಎಂದರೆ ಸರಿಯಲ್ಲ.ಸಾಕ್ಷಿಯು ಮುಂದುವರೆದು ವಾಟ್ನಿಯಾಗಿರುತ್ತವೆ ಎಂದು ನುಡಿಯುತ್ತಾರೆ. ಸದರಿ ವಾಟ್ನಿಯನ್ನು ರುಜುವಾತು ಪಡಿಸಲು ನಾನು ವಾಟ್ನಿಪತ್ರ ಹಾಜರಪಡಿಸಿಲ್ಲ.

4. ದಾವಾಸ್ವತ್ತು ಸಿ.ಟಿ.ಎಸ್ 514, 515 ಮತ್ತು 517 ರ ದಾಖಲೆಗಳಲ್ಲಿ ಮೃತ್ಯು ಪತ್ರದ ಆಧಾರದ ಮೇಲೆ ನನ್ನ ಹೆಸರನ್ನು ಸೇರಿಸಲಾಗಿದೆ. ಸದರಿ ಮೃತ್ಯು ಪತ್ರವನ್ನು ಭಾಗವ್ವ ಬರೆದುಕೊಟ್ಟಿರುತ್ತಾರೆ. ಸದರಿ ಭಾಗವ್ವ ಇವರನ್ನು ನಾವು ಆರೈಕೆ ಮಾಡುತ್ತಿದ್ದರಿಂದ ನನ್ನ ಪರವಾಗಿ ಮೃತ್ಯು ಪತ್ರ ಬರೆದುಕೊಟ್ಟಿರುತ್ತಾರೆ. ಸದರಿ ಭಾಗವ್ವ ಇವರ ಭಾಗದ ಸ್ವತ್ತು ಆತನ ಸಹೋದರರಿಗೆ ಹೋಗುತ್ತದೆ ಎಂದು ತಿಳಿದು ನಾನು ಸುಳ್ಳು ಮೃತ್ಯುಪತ್ರ ಸೃಷ್ಟಿಮಾಡಿರುತ್ತೇನೆ ಎಂರದೆ ಸರಿಯಲ್ಲ. ನಮ್ಮ ಮನೆತನದಲ್ಲಿ ನಾನೊಬ್ಬನೆ ಶಿಕ್ಷಣ ಪಡೆದ ವ್ಯಕ್ತಿ ಎಂದರೆ ಸರಿಯಲ್ಲ. ನನ್ನ ಚಿಕ್ಕಪ್ಪ ಮತ್ತು ದೊಡ್ಡಪ್ಪಂದಿರು ಅನಕ್ಷರಸ್ಥ ಮತ್ತು ಮುಗ್ಧ ವ್ಯಕ್ತಿಗಳು ಆಗಿರುತ್ತಾರೆ ಎಂದರೆ ಸರಿಯಲ್ಲ. ದಿಃ 03-07-2014 ರಂದು ನಾನೇ ಮಾಹಿತಿ ನೀಡಿ ಸುಳ್ಳು ಮೃತ್ಯುಪತ್ರ/ನಿಡಿ-5ನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಲಕ್ಷ್ಮಿಬಾಯಿ ಇವರ ಮರಣಾನಂತರ

ಭಾಗವ್ವ ಇವರನ್ನು ವಾರಸುದಾರರು ಎಂದು ಅವರ ಹೆಸರನ್ನು ನಾನೇ ದಾಖಲೆಗಳಲ್ಲಿ ನಮೂದು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಭಾಗವ್ವ ಇವರ ಆರೈಕೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ವಾದಿ ಗೌರವ್ವ ಸದರಿ ಭಾಗವ್ವ ಇವರ ಆರೈಕೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಯಾರಿಗೆ ಎಷ್ಟು ಪಾಲು ಬಂದಿರುತ್ತದೆ ಎಂದು ತೋರಿಸಲು ನಾನು ಕಚ್ಚಾ ಟಿಪ್ಪಣಿ ಹಾಜರಪಡಿಸಿಲ್ಲ. ನಾನು ನಮ್ಮ ಊರಲ್ಲಿ ಸಣ್ಣಪುಟ್ಟ ನ್ಯಾಯಪಂಚಾಯತಿಗಳನ್ನು ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳೊಂದಿಗೆ ಶಾಮಿಲಾಗಿ ಸುಳ್ಳು ಮೃತ್ಯುಪತ್ರದ ಆಧಾರದ ಮೇಲೆ ದಾವಾಸ್ವತ್ತು ಕ್ರಮಾಂಕ 1 ರಿಂದ 3 ದಾಖಲೆಗಳಲ್ಲಿ ನನ್ನ ಹೆಸರನ್ನು ಸೇರಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮೃತ್ಯುಪತ್ರವನ್ನು ನಮ್ಮ ಕುಟುಂಬದ ಇತರೆ ಸದಸ್ಯರಿಗೆ ಗೊತ್ತಾಗದ ಹಾಗೆ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

5. ನನ್ನ ತಂದೆಯ ಮರಣಾನಂತರ ಸದರಿ ಮೂರು ದಾವಾಸ್ವತ್ತುಗಳ ದಾಖಲೆಗಳಲ್ಲಿ ವಾರಸಾನಾತೆಯಿಂದ ನನ್ನ ಹೆಸರು ಸೇರಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ವಾರಸಾ ನಾತೆಯಿಂದ ನನ್ನ ತಂದೆಯ ಎಲ್ಲ ವಾರಸದಾರರು ದಾಖಲೆಗಳಲ್ಲಿ ಹೆಸರು ಸೇರಿಸಿಕೊಂಡಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಿಟಿ ಸರ್ವೆ ಕಾರ್ಯಾಲಯದಲ್ಲಿ ನನ್ನ ಹೆಸರನ್ನು ಸೇರಿಸಲು ನಾನೇ ಅರ್ಜಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ಹೆಚ್ಚಿನ ಪಾಲು ಪಡೆಯಬೇಕು ಎಂಬ ದುರುದ್ದೇಶದಿಂದ ವಾರಸಾ ನಾತೆಯಿಂದ ನನ್ನ ಹೆಸರನ್ನು ಸಹ ಸೇರಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮೃತ್ಯುಪತ್ರ ವಾದಿಯರಿಗೆ ಬಂಧನಕಾರಿಯಾಗಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿರುವರು.

ಸಹಿ/-

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ